# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 258/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಗೋಪಾಲ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಶಿವಣ್ ಗೌಡ | | 12.11.2024 |
| ವಯಸ್ಸು | ಃ 49 ವರ್ಷ | | |
| ವೃತ್ತಿ | ಃ ಹೋಟೇಲ್ | ಪ್ರಾ.ಸಾ. ಃ | 10 |
| ವಾಸಸ್ಥಳ | ಃ ಕೆರೆತೋಣ್ಣುರು | ಚಾ.ಸಾ. ಃ | 13 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಮಮತಾ ಮತ್ತು ಚಾ.ಸಾ-1 ರಾಮೇಗೌಡರ ಪರಿಚಯ ಇದೆ. ದಿಃ24.05.2023 ರಂದು ಸಂಜೆ 4 ಗಂಟೆಗೆ ಚಾ.ಸಾ-1 ರಾಮೇಗೌಡರು ನನ್ನ ಹೋಟೆಲ್ ಬಳಿ ಬಂದು ಸಿದ್ದಲಿಂಗಪುರದ ಬಳಿ ಮಮತಾ ಇವರ ಕೊಲೆಯಾದ ಬಗ್ಗೆ ಹೇಳಿ ನನ್ನೊಂದಿಗೆ ಬರುವಂತೆ ಹೇಳಿದಾಗ ನಾನು, ಕುಮಾರ, ಪವಿತ್ ರಾಜ್ ಮತ್ತು ಇತರರು ರಾಮೇಗೌಡರ ಜೊತೆ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಹೋಗಿದ್ದೆವು ಆಗ ಅಲ್ಲಿ ಮಮತಾ ಇವರ ಮೃತ ದೇಹವನ್ನು ನೋಡಿದ್ದೆವು. ಆ ಕಾಲಕ್ಕೆ ಮಮತಾ ಇವರ ತಲೆ ಎಡಭಾಗಕ್ಕೆ ಗಾಯವಾಗಿತ್ತು. ಆ ಕಾಲಕ್ಕೆ ಮೋಹನ್ ಕುಮಾರ್ ಎನ್ನುವವರು ಮಮತಾ ಇವರನ್ನು ಕೊಲೆ ಮಾಡಿದ ಬಗ್ಗೆ ಗೊತ್ತಾಗಿತ್ತು. ನಂತರ ಸಿದ್ದಲಿಂಗಂಪುರದ ಬೇಕರಿ ಬಳಿ ಹೋಗಿ ಕೊಲೆಯಾಗಿದ್ದ ಸ್ಥಳವನ್ನು ನೋಡಿದ್ದೆವು ಮತ್ತು ಅಲ್ಲಿ ಸ್ಥಳೀಯರನ್ನು ವಿಚಾರಿಸಿದ್ದೆವು. ಆಗ ಮಮತಾ ಇವರು ಸಾಲದ ಹಣವನ್ನು ವಾಪಸ್ಸು

ಕೇಳಿದಾಗ ಮೋಹನ್ ಕುಮಾರ್ ಇವರು ರಾಡಿನಿಂದ ಹೊಡೆದು ಕೊಲೆ ಮಾಡಿದ್ದಾಗಿ ಹೇಳಿದ್ದರು. ಈ ಬಗ್ಗೆ ಪೋಲೀಸರು ವಿಚಾರಣೆ ಮಾಡಿದ್ದಾರೆ.

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಜೆ.ಪಿ ವಕೀಲರ ಪರವಾಗಿ ಶ್ರೀಮತಿ ಕೆ.ಎಂ.ಎಸ್ ರವರಿಂದಃ-

2. ಆರೋಪಿತ ಮಮತಾ ಇವರಿಗೆ ಎಷ್ಟು ಹಣ ಕೊಡಬೇಕು ಎಂದು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕೆ ಮಮತಾ ಮರಣಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಕೆ.ಆರ್. ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನೊಂದಿಗೆ ರಾಮೇಗೌಡ, ಪವಿತ್ ರಾಜ್, ಕುಮಾರ್ ಮತ್ತು ಇತರರು ಕೆ.ಆರ್. ಆಸ್ಪತ್ರೆಗೆ ಬಂದಿದ್ದರು. ರಾಮೇಗೌಡರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು